ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue- 4, September - October 2026, Pp. 54-63
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ರಾಜಕೀಯ ಭಾಗವಹಿಸುವಿಕೆ ಮತ್ತು ರಾಜಕೀಯ ಮಿಥ್ಯೆಗಳ ಹರಡುವಿಕೆಯಲ್ಲಿ ಸಾಮಾಜಿಕ ಮಾಧ್ಯಮದ ಪ್ರಭಾವ: ಒಂದು ತುಲನಾತ್ಮಕ ಅಧ್ಯಯನ

**ನಾಗೇಶ ಶೆಟ್ಟಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭಟ್ಕಳ–ಉತ್ತರ ಕನ್ನಡ

**Abstract:**
*ಸಾಮಾಜಿಕ ಮಾಧ್ಯಮವು ಭಾರತದ ರಾಜಕೀಯ ಸಂವಹನ, ಸಾರ್ವಜನಿಕ ಭಾಗವಹಿಸುವಿಕೆ ಮತ್ತು ಚುನಾವಣಾ ಪ್ರಚಾರದ ಸ್ವರೂಪವನ್ನು ಗಮನಾರ್ಹವಾಗಿ ಬದಲಿಸಿದೆ. ವಾಟ್ಸಾಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್ ಮತ್ತು ಎಕ್ಸ್‌ನಂತಹ ವೇದಿಕೆಗಳು ರಾಜಕೀಯ ಮಾಹಿತಿ ಪ್ರಸಾರ, ಸಾರ್ವಜನಿಕ ಚರ್ಚೆ ಹಾಗೂ ಅಭಿಪ್ರಾಯ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಈ ಲೇಖನವು ಕರ್ನಾಟಕದ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮವು ರಾಜಕೀಯ ಭಾಗವಹಿಸುವಿಕೆ ಹಾಗೂ ರಾಜಕೀಯ ಮಿಥ್ಯೆಗಳು, ತಪ್ಪು ಮಾಹಿತಿ ಮತ್ತು ಉದ್ದೇಶಪೂರ್ವಕ ತಪ್ಪು ಮಾಹಿತಿಯ ಹರಡುವಿಕೆಯ ಮೇಲೆ ಬೀರುವ ಪ್ರಭಾವವನ್ನು ತುಲನಾತ್ಮಕವಾಗಿ ವಿಶ್ಲೇಷಿಸುತ್ತದೆ. ವಿಶೇಷವಾಗಿ ಯುವ ಮತದಾರರು, ಮೊದಲ ಬಾರಿಗೆ ಮತ ಚಲಾಯಿಸುವವರು ಹಾಗೂ ವಿವಿಧ ಸಾಮಾಜಿಕ ಗುಂಪುಗಳನ್ನು ತಲುಪುವಲ್ಲಿ ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಮತ್ತು ಡಿಜಿಟಲ್ ಚುನಾವಣಾ ಪ್ರಚಾರದ ಪಾತ್ರವನ್ನು ಪರಿಶೀಲಿಸಲಾಗಿದೆ. ಜೊತೆಗೆ ಸುಳ್ಳು ಸುದ್ದಿ, ತಿರುಚಿದ ಚಿತ್ರ–ವಿಡಿಯೋಗಳು, ಡೀಪ್‌ಫೇಕ್‌ಗಳು, ದ್ವೇಷ ಭಾಷಣ, ರಾಜಕೀಯ ಧ್ರುವೀಕರಣ ಮತ್ತು ಪ್ರತಿಧ್ವನಿ ಕೋಣೆಗಳಂತಹ ಸವಾಲುಗಳನ್ನು ಗುರುತಿಸಲಾಗಿದೆ. ಸಾಮಾಜಿಕ ಮಾಧ್ಯಮವು ರಾಜಕೀಯ ಭಾಗವಹಿಸುವಿಕೆಯನ್ನು ವಿಸ್ತರಿಸುವ ಸಾಮರ್ಥ್ಯ ಹೊಂದಿದ್ದರೂ, ಅದರ ಪರಿಣಾಮಕಾರಿ ಬಳಕೆಗೆ ಡಿಜಿಟಲ್ ಸಾಕ್ಷರತೆ, ಪಾರದರ್ಶಕತೆ, ಜವಾಬ್ದಾರಿಯುತ ವಿಷಯ ರಚನೆ ಮತ್ತು ವೇದಿಕೆಗಳ ಹೊಣೆಗಾರಿಕೆ ಅಗತ್ಯವಾಗಿದೆ*

**Keywords:** *ಸಾಮಾಜಿಕ ಮಾಧ್ಯಮ, ರಾಜಕೀಯ ಭಾಗವಹಿಸುವಿಕೆ, ಚುನಾವಣೆ, ಸಾಮಾಜಿಕ ಮಾಧ್ಯಮ ಪ್ರಭಾವಿಗಳು, ರಾಜಕೀಯ ಸಂವಹನ, ಡಿಜಿಟಲ್ ಪ್ರಜಾಪ್ರಭುತ್ವ.*

## ಪೀಠಿಕೆ

ಸಾಮಾಜಿಕ ಮಾಧ್ಯಮದ ಬೆಳವಣಿಗೆಯು ಭಾರತದಲ್ಲಿ ರಾಜಕೀಯ ಸಂವಹನ, ಚುನಾವಣಾ ಪ್ರಚಾರ ಮತ್ತು ಸಾರ್ವಜನಿಕ ಅಭಿಪ್ರಾಯ ರೂಪುಗೊಳಿಸುವಿಕೆಯ ಸ್ವರೂಪವನ್ನು ಗಣನೀಯವಾಗಿ ಬದಲಿಸಿದೆ. ಹಿಂದೆ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಪತ್ರಿಕೆ, ದೂರದರ್ಶನ, ಸಾರ್ವಜನಿಕ ಸಭೆಗಳು, ಪೋಸ್ಟರ್‌ಗಳು ಹಾಗೂ ಮನೆಮನೆಗೆ ತೆರಳಿ ನಡೆಸುವ ಪ್ರಚಾರವನ್ನು ಅವಲಂಬಿಸುತ್ತಿದ್ದರು. ಆದರೆ ಇಂದು ಫೇಸ್‌ಬುಕ್, ವಾಟ್ಸಾಪ್, ಇನ್‌ಸ್ಟಾಗ್ರಾಂ, ಯೂಟ್ಯೂಬ್ ಮತ್ತು ಎಕ್ಸ್‌ನಂತಹ ಡಿಜಿಟಲ್ ವೇದಿಕೆಗಳ ಮೂಲಕ ರಾಜಕೀಯ ಸಂದೇಶಗಳನ್ನು

***Please cite this article as:*** ನಾಗೇಶ ಶೆಟ್ಟಿ. (2026). ರಾಜಕೀಯ ಭಾಗವಹಿಸುವಿಕೆ ಮತ್ತು ರಾಜಕೀಯ ಮಿಥ್ಯೆಗಳ ಹರಡುವಿಕೆಯಲ್ಲಿ ಸಾಮಾಜಿಕ ಮಾಧ್ಯಮದ ಪ್ರಭಾವ: ಒಂದು ತುಲನಾತ್ಮಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(4), 54–63

ತ್ವರಿತವಾಗಿ ಹಂಚಿಕೊಳ್ಳಲು, ಚರ್ಚಿಸಲು ಮತ್ತು ಸಾರ್ವಜನಿಕರಿಗೆ ತಲುಪಿಸಲು ಸಾಧ್ಯವಾಗಿದೆ.

ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಹಾಗೂ ಡಿಜಿಟಲ್ ವಿಷಯ ಸೃಷ್ಟಿಕರ್ತರು ವಿಡಿಯೋಗಳು, ನೇರ ಪ್ರಸಾರಗಳು, ಪಾಡ್‌ಕಾಸ್ಟ್‌ಗಳು ಮತ್ತು ರಾಜಕೀಯ ವಿಶ್ಲೇಷಣೆಗಳ ಮೂಲಕ ವಿಶೇಷವಾಗಿ ಯುವಜನರ ರಾಜಕೀಯ ಅಭಿಪ್ರಾಯ ರೂಪುಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಈ ವೇದಿಕೆಗಳು ನಾಗರಿಕರಿಗೆ ರಾಜಕೀಯ ವಿಷಯಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಲು, ಚರ್ಚೆಗಳಲ್ಲಿ ಭಾಗವಹಿಸಲು, ರಾಜಕಾರಣಿಗಳನ್ನು ಸಂಪರ್ಕಿಸಲು ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಹೊಸ ಅವಕಾಶಗಳನ್ನು ಒದಗಿಸಿವೆ.

ಆದರೆ ಸಾಮಾಜಿಕ ಮಾಧ್ಯಮದ ಮತ್ತೊಂದು ಮುಖವೆಂದರೆ ಸುಳ್ಳು ಸುದ್ದಿ, ತಪ್ಪು ಮಾಹಿತಿ, ಉದ್ದೇಶಪೂರ್ವಕ ತಪ್ಪು ಮಾಹಿತಿ, ದ್ವೇಷ ಭಾಷಣ ಮತ್ತು ರಾಜಕೀಯ ಧ್ರುವೀಕರಣದ ಹರಡುವಿಕೆ. ವಿಶೇಷವಾಗಿ ರಾಜಕೀಯ ಮಿಥ್ಯೆಗಳು ಅತಿರಂಜಿತ, ದಾರಿತಪ್ಪಿಸುವ ಅಥವಾ ಪರಿಶೀಲಿಸದ ಮಾಹಿತಿಯನ್ನು ನಿರಂತರವಾಗಿ ಪ್ರಸಾರ ಮಾಡುವ ಮೂಲಕ ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ ಬೀರುವ ಸಾಧ್ಯತೆಯನ್ನು ಹೊಂದಿವೆ. ಇವು ರಾಜಕಾರಣಿಗಳು, ಸರ್ಕಾರದ ಯೋಜನೆಗಳು, ಚುನಾವಣೆಗಳು, ಸಮುದಾಯಗಳು ಮತ್ತು ರಾಜಕೀಯ ಘಟನೆಗಳಿಗೆ ಸಂಬಂಧಿಸಿದಂತೆ ಕಾಣಿಸಿಕೊಳ್ಳಬಹುದು.

ಈ ಹಿನ್ನೆಲೆಯಲ್ಲಿ, ಕರ್ನಾಟಕದ ರಾಜಕೀಯ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮದ ದ್ವಂದ್ವ ಸ್ವರೂಪವನ್ನು ಈ ಅಧ್ಯಯನವು ವಿಶ್ಲೇಷಿಸುತ್ತದೆ. ಸಾಮಾಜಿಕ ಮಾಧ್ಯಮವು ಒಂದು ಕಡೆ ರಾಜಕೀಯ ಭಾಗವಹಿಸುವಿಕೆ ಮತ್ತು ಜಾಗೃತಿಯನ್ನು ಹೆಚ್ಚಿಸುವ ಸಾಧನವಾಗಿದ್ದರೆ, ಮತ್ತೊಂದು ಕಡೆ ರಾಜಕೀಯ ಮಿಥ್ಯೆಗಳು ಹಾಗೂ ತಪ್ಪು ಮಾಹಿತಿಯ ಮೂಲಕ ಸಾರ್ವಜನಿಕರ ರಾಜಕೀಯ ಅರ್ಥೈಸುವಿಕೆಯನ್ನು ಪ್ರಭಾವಿಸುವ ಸಾಧ್ಯತೆಯನ್ನು ಹೊಂದಿದೆ.

**ಅಧ್ಯಯನದ ಉದ್ದೇಶಗಳು**

1. ರಾಜಕೀಯ ಭಾಗವಹಿಸುವಿಕೆಯ ಮೇಲೆ ಸಾಮಾಜಿಕ ಮಾಧ್ಯಮದ ಪ್ರಭಾವವನ್ನು ಅಧ್ಯಯನ ಮಾಡುವುದು.
2. ರಾಜಕೀಯ ಸಂವಹನದಲ್ಲಿ ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಮತ್ತು ಡಿಜಿಟಲ್ ಕಂಟೆಂಟ್ ರಚನೆಕಾರರ ಪಾತ್ರವನ್ನು ವಿಶ್ಲೇಷಿಸುವುದು.
3. ರಾಜಕೀಯ ಮಿಥ್ಯೆಗಳು, ಸುಳ್ಳು ಸುದ್ದಿ ಮತ್ತು ಉದ್ದೇಶಪೂರ್ವಕ ತಪ್ಪು ಮಾಹಿತಿಯ ಹರಡುವಿಕೆಯನ್ನು ಅಧ್ಯಯನ ಮಾಡುವುದು.
4. ಸಾಮಾಜಿಕ ಮಾಧ್ಯಮ, ರಾಜಕೀಯ ಧ್ರುವೀಕರಣ ಮತ್ತು ಸಮುದಾಯ ಆಧಾರಿತ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು.

**ಸಂಶೋಧನಾ ವಿಧಾನ**

ಈ ಅಧ್ಯಯನವು ರಾಜಕೀಯ ಭಾಗವಹಿಸುವಿಕೆ ಮತ್ತು ರಾಜಕೀಯ ಮಿಥ್ಯೆಗಳ ಹರಡುವಿಕೆಯ ಮೇಲೆ ಸಾಮಾಜಿಕ ಮಾಧ್ಯಮದ ಪ್ರಭಾವವನ್ನು ಅಧ್ಯಯನ ಮಾಡಲು ಮಿಶ್ರ ಸಂಶೋಧನಾ ವಿಧಾನ (Mixed Method Research Design) ವನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ದ್ವಿತೀಯ ದತ್ತಾಂಶವನ್ನು ಆಧರಿಸಿದ್ದು, ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಸಂಶೋಧನಾ ಲೇಖನಗಳು, ಪುಸ್ತಕಗಳು, ಚುನಾವಣಾ ಆಯೋಗದ ವರದಿಗಳು, ಸರ್ಕಾರಿ ದಾಖಲೆಗಳು, ಪತ್ರಿಕಾ ವರದಿಗಳು ಹಾಗೂ ವಿಶ್ವಾಸಾರ್ಹ ಡಿಜಿಟಲ್ ಮೂಲಗಳಿಂದ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ

**ಸಂಶೋಧನಾ ಪ್ರಾಕ್ಕಲ್ಪನೆಗಳು**

1. ಸಾಮಾಜಿಕ ಮಾಧ್ಯಮ ಬಳಕೆ ಮತ್ತು ರಾಜಕೀಯ ಭಾಗವಹಿಸುವಿಕೆಯ ನಡುವೆ ಮಹತ್ವದ ಸಂಬಂಧವಿದೆ.

2. ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಯುವ ಮತದಾರರ ರಾಜಕೀಯ ಅಭಿಪ್ರಾಯ ನಿರ್ಮಾಣದ ಮೇಲೆ ಗಮನಾರ್ಹ ಪ್ರಭಾವ ಬೀರುತ್ತಾರೆ.
3. ಸಾಮಾಜಿಕ ಮಾಧ್ಯಮಗಳ ಮೂಲಕ ತಪ್ಪು ಮಾಹಿತಿಯಪ್ರಭಾವಕ್ಕೆ ಒಳಗಾಗುವಿಕೆ ಹಾಗೂ ರಾಜಕೀಯ ಮಿಥ್ಯೆಗಳನ್ನು ನಂಬುವ ಮತ್ತು ಸ್ವೀಕರಿಸುವ ಪ್ರವೃತ್ತಿಯೊಂದಿಗೆ ಗಮನಾರ್ಹ ವಾದ ಸಂಬಂಧವನ್ನು ಹೊಂದಿದೆ
4. ಹೆಚ್ಚಿನ ಡಿಜಿಟಲ್ ಸಾಕ್ಷರತೆ ಹೊಂದಿರುವವರು ರಾಜಕೀಯ ಸುಳ್ಳು ಸುದ್ದಿಯನ್ನು ಗುರುತಿಸುವಲ್ಲಿ ಹೆಚ್ಚಿನ ಸಾಮರ್ಥ್ಯ ಹೊಂದಿರುತ್ತಾರೆ.

**ಸಾಮಾಜಿಕ ಮಾಧ್ಯಮ ಮತ್ತು ರಾಜಕೀಯ ಭಾಗವಹಿಸುವಿಕೆ**

ಸಾಂಪ್ರದಾಯಿಕವಾಗಿ, ರಾಜಕೀಯ ಭಾಗವಹಿಸುವಿಕೆ ಎಂದರೆ ಮತದಾನ ಮಾಡುವುದು, ರಾಜಕೀಯ ಸಭೆಗಳಲ್ಲಿ ಭಾಗವಹಿಸುವುದು, ರಾಜಕೀಯ ಪಕ್ಷಗಳ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು, ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವುದು ಹಾಗೂ ಚುನಾಯಿತ ಪ್ರತಿನಿಧಿಗಳನ್ನು ಸಂಪರ್ಕಿಸುವಂತಹ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಆದರೆ ಇಂದು ಸಾಮಾಜಿಕ ಮಾಧ್ಯಮವು ರಾಜಕೀಯ ಭಾಗವಹಿಸುವಿಕೆಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತಾರಗೊಳಿಸಿದೆ

ರಾಜಕೀಯ ಭಾಗವಹಿಸುವಿಕೆಯಲ್ಲಿ ರಾಜಕೀಯ ಸಂದೇಶಗಳಿಗೆ ಪ್ರತಿಕ್ರಿಯಿಸುವುದು, ಮಾಹಿತಿಯನ್ನು ಹಂಚಿಕೊಳ್ಳುವುದು, ವಿಡಿಯೋಗಳನ್ನು ರಚಿಸುವುದು, ಆನ್‌ಲೈನ್ ಅಭಿಯಾನಗಳಲ್ಲಿ ಭಾಗವಹಿಸುವುದು, ಹ್ಯಾಶ್‌ಟ್ಯಾಗ್‌ಗಳನ್ನು ಬಳಸುವುದು, ಡಿಜಿಟಲ್ ಸಮುದಾಯಗಳಿಗೆ ಸೇರುವುದು ಮತ್ತು ಆನ್‌ಲೈನ್ ಮೂಲಕ ಆಫ್‌ಲೈನ್ ಚಟುವಟಿಕೆಗಳನ್ನು ಸಂಘಟಿಸುವುದೂ ಕೂಡಾ ಸೇರಿವೆ.

ಸಾಮಾಜಿಕ ಮಾಧ್ಯಮದ ಬೆಳವಣಿಗೆಯು ನಾಗರಿಕರ ರಾಜಕೀಯ ಅಭಿವ್ಯಕ್ತಿಗೆ ಇದ್ದ ಸಾಂಪ್ರದಾಯಿಕ ಅಡೆತಡೆಗಳನ್ನು ತೊಡೆದು ಹಾಕುವ ಮೂಲಕ ರಾಜಕೀಯ ಸಂವಹನಕ್ಕೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿದೆ. ಒಬ್ಬ ನಾಗರಿಕನು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪತ್ರಿಕೆ ಅಥವಾ ದೂರದರ್ಶನದಂತಹ ಸಾಂಪ್ರದಾಯಿಕ ಮಾಧ್ಯಮ ವನ್ನು ಅವಲಂಬಿಸಬೇಕಾದ ಅಗತ್ಯವಿಲ್ಲ. ಸ್ಮಾರ್ಟ್‌ಫೋನ್ ಮತ್ತು ಇಂಟರ್ನೆಟ್ ಸಂಪರ್ಕದ ಮೂಲಕ ರಾಜಕೀಯ ವಿಷಯಗಳನ್ನು ಸ್ವತಃ ಸೃಷ್ಟಿಸಿ, ಪ್ರಕಟಿಸಿ ಹಾಗೂ ವ್ಯಾಪಕವಾಗಿ ಹಂಚಿಕೊಳ್ಳಲು ಅವಕಾಶವನ್ನು ಕಲ್ಪಿಸಿದೆ.

ಯುವಜನರ ರಾಜಕೀಯ ಅಭಿವ್ಯಕ್ತಿ ಮತ್ತು ಭಾಗವಹಿಸುವಿಕೆಯ ದೃಷ್ಟಿಯಿಂದ ಸಾಮಾಜಿಕ ಮಾಧ್ಯಮದ ಈ ಬೆಳವಣಿಗೆಯು ವಿಶೇಷ ಮಹತ್ವವನ್ನು ಹೊಂದಿದೆ. ಮೊದಲ ಬಾರಿಗೆ ಮತ ಚಲಾಯಿಸುವವರು ಸಾಂಪ್ರದಾಯಿಕ ಮಾಧ್ಯಮಗಳಿ ಗಿಂತ ಇನ್‌ಸ್ಟಾಗ್ರಾಂ, ರೀಲ್ಸ್, ಯೂಟ್ಯೂಬ್ ವಿಡಿಯೋಗಳು ಮತ್ತು ವಾಟ್ಸಾಪ್ ಗುಂಪುಗಳ ಮೂಲಕ ರಾಜಕೀಯ ಮಾಹಿತಿಯನ್ನು ಪಡೆಯುವುದು ಹೆಚ್ಚಾಗಿದೆ.

ಆದಾಗ್ಯೂ, ಆನ್‌ಲೈನ್ ರಾಜಕೀಯ ಚಟುವಟಿಕೆಗಳ ಹೆಚ್ಚಳವನ್ನು ಯಾವಾಗಲೂ ತಿಳುವಳಿಕೆಯಿಂದ ಕೂಡಿದ ಹಾಗೂ ಜವಾಬ್ದಾರಿಯುತ ರಾಜಕೀಯ ಭಾಗವಹಿಸುವಿಕೆಯ ಸೂಚಕವೆಂದು ಪರಿಗಣಿಸಲಾಗುವುದಿಲ್ಲ. ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ವ್ಯಕ್ತಿಗಳು ಅದನ್ನು ಸುಲಭವಾಗಿ ಹಂಚಿಕೊಳ್ಳುವ ಸಾಧ್ಯತೆಯಿರುವುದರಿಂದ, ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಮಾಹಿತಿಯ ಪ್ರಸರಣ ವೇಗವಾಗಿ ನಡೆಯಬಹುದು.. ಹೀಗಾಗಿ, ಸಾಮಾಜಿಕ ಮಾಧ್ಯಮಗಳಲ್ಲಿ ರಾಜಕೀಯ ಚಟುವಟಿಕೆಗಳ ಪ್ರಮಾಣ ಹೆಚ್ಚುತ್ತಿರುವುದನ್ನು ಮಾತ್ರ ಆಧರಿಸಿ ಪ್ರಜಾಪ್ರಭುತ್ವದ ಗುಣಮಟ್ಟದಲ್ಲಿ ಸುಧಾರಣೆ

ಉಂಟಾಗಿದೆ ಎಂದು ನಿರ್ಧರಿಸಲು ಸಾಧ್ಯವಾಗುವದಿಲ್ಲ.

**ಚುನಾವಣಾ ಪ್ರಚಾರದ ಸಾಧನವಾಗಿ ಸಾಮಾಜಿಕ ಮಾಧ್ಯಮ**

ರಾಜಕೀಯ ಪ್ರಚಾರದಲ್ಲಿ ಸಾಂಪ್ರದಾಯಿಕ ಹಾಗೂ ಡಿಜಿಟಲ್ ವಿಧಾನಗಳ ಸಂಯೋಜನೆಯು ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಸಾರ್ವಜನಿಕ ಸಭೆಗಳು, ರಾಜಕೀಯ ಸಮಾವೇಶಗಳು, ಪತ್ರಿಕಾ ಜಾಹೀರಾತುಗಳು ಹಾಗೂ ಮನೆಮನೆಗೆ ತೆರಳಿ ನಡೆಸುವ ಚುನಾವಣಾ ಪ್ರಚಾರಗಳು ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳಲ್ಲಿ ಇಂದಿಗೂ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಇದರ ಜೊತೆಗೆ, ಮತದಾರರನ್ನು ತಲುಪಲು ಸಾಮಾಜಿಕ ಮಾಧ್ಯಮ ವೇದಿಕೆಗಳನ್ನೂ ವ್ಯಾಪಕವಾಗಿ ಬಳಸಲಾಗುತ್ತಿದೆ. ಫೇಸ್ಬುಕ್ ನೇರ ಪ್ರಸಾರ, ವಾಟ್ಸಾಪ್ ಗುಂಪುಗಳು, ಇನ್‌ಸ್ಟಗ್ರಾಂ ರೀಲ್ಸ್, ಯೂಟ್ಯೂಬ್ ಸಂದರ್ಶನಗಳು ಮತ್ತು ಎಕ್ಸ್ ಹ್ಯಾಶ್‌ಟ್ಯಾಗ್‌ಗಳ ಅಭಿಯಾನಗಳು ಪ್ರಮುಖ ಡಿಜಿಟಲ್ ಪ್ರಚಾರ ವಿಧಾನಗಳಾಗಿವೆ.

ಸಾಮಾಜಿಕ ಮಾಧ್ಯಮದ ಪ್ರಮುಖ ಪ್ರಯೋಜನವೆಂದರೆ ರಾಜಕೀಯ ನಾಯಕರು ಮತ್ತು ನಾಗರಿಕರ ನಡುವೆ ನೇರ ಸಂವಹನಕ್ಕೆ ಅವಕಾಶ ಕಲ್ಪಿಸುವುದು. ಇದರಿಂದ ರಾಜಕೀಯ ನಾಯಕರು ಸಾಂಪ್ರದಾಯಿಕ ಮಾಧ್ಯಮಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಂಡು, ತಮ್ಮ ಕಾರ್ಯಕರ್ತರುಗಳು ಹಾಗೂ ಮತದಾರರಿಗೆ ರಾಜಕೀಯ ಸಂದೇಶಗಳು, ಯೋಜನೆಗಳು ಮತ್ತು ಸಾರ್ವಜನಿಕ ಪ್ರತಿಕ್ರಿಯೆಗಳನ್ನು ನೇರವಾಗಿ ತಲುಪಿಸಬಹುದು.

ಸಾಮಾಜಿಕ ಮಾಧ್ಯಮವು ಕಡಿಮೆ ವೆಚ್ಚದಲ್ಲಿ ರಾಜಕೀಯ ಪ್ರಚಾರ ನಡೆಸಲು ಸಹ ಅವಕಾಶ ಕಲ್ಪಿಸುತ್ತದೆ. ಒಂದೇ ಒಂದು ವಿಡಿಯೋ ಅಥವಾ ರಾಜಕೀಯ ಸಂದೇಶವು ಅಲ್ಪಾವಧಿಯಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ತಲುಪುವ ಸಾಮರ್ಥ್ಯವನ್ನು ಹೊಂದಿದೆ. ಇದರಿಂದ ಸಣ್ಣ ರಾಜಕೀಯ ಸಂಘಟನೆಗಳು ಹಾಗೂ ಸ್ವತಂತ್ರ ಅಭ್ಯರ್ಥಿಗಳು ಸಹ ತಮ್ಮ ವಿಚಾರಗಳು, ನೀತಿಗಳು ಮತ್ತು ಚುನಾವಣಾ ಸಂದೇಶಗಳನ್ನು ವ್ಯಾಪಕವಾಗಿ ಜನರಿಗೆ ತಲುಪಿಸಲು ಅವಕಾಶ ದೊರೆಯುತ್ತದೆ

ಸಾಮಾಜಿಕ ಮಾಧ್ಯಮ ಆಧಾರಿತ ರಾಜಕೀಯ ಪ್ರಚಾರದ ಮತ್ತೊಂದು ಪ್ರಮುಖ ಲಕ್ಷಣವೆಂದರೆ ನಿರ್ದಿಷ್ಟ ಮತದಾರರನ್ನು ಗುರಿಯಾಗಿಸಿಕೊಂಡು, ದತ್ತಾಂಶ ವಿಶ್ಲೇಷಣಾ ತಂತ್ರಜ್ಞಾನಗಳ ನೆರವಿನಿಂದ ಮತದಾರರ ವಯಸ್ಸು, ವಾಸಸ್ಥಳ, ಆಸಕ್ತಿಗಳು ಹಾಗೂ ಇತರ ಗುಣಲಕ್ಷಣಗಳನ್ನು ಆಧರಿಸಿ ವಿವಿಧ ಮತದಾರ ಗುಂಪುಗಳನ್ನು ಗುರುತಿಸಲಾಗುತ್ತದೆ. ನಂತರ, ಪ್ರತಿ ಗುಂಪಿನ ನಿರ್ದಿಷ್ಟ ಅಗತ್ಯಗಳು ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ವಿಭಿನ್ನ ರಾಜಕೀಯ ಸಂದೇಶಗಳನ್ನು ರೂಪಿಸಿ ತಲುಪಿಸಲಾಗುತ್ತದೆ. ಮೈಕ್ರೋ–ಟಾರ್ಗೆಟಿಂಗ್ ಮೂಲಕ ವಿವಿಧ ಸಾಮಾಜಿಕ ಗುಂಪುಗಳ ನಿರ್ದಿಷ್ಟ ಅಗತ್ಯಗಳು ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ರಾಜಕೀಯ ಸಂದೇಶಗಳನ್ನು ರೂಪಿಸಬಹುದು. ಉದಾಹರಣೆಗೆ, ಯುವಕರಿಗೆ ಉದ್ಯೋಗ ಮತ್ತು ಶಿಕ್ಷಣ, ರೈತರಿಗೆ ಕೃಷಿ ನೀತಿಗಳು ಹಾಗೂ ಮಹಿಳೆಯರಿಗೆ ಕಲ್ಯಾಣ ಯೋಜನೆಗಳು ಮತ್ತು ಸುರಕ್ಷತೆಗೆ ಸಂಬಂಧಿಸಿದ ಸಂದೇಶಗಳನ್ನು ತಲುಪಿಸಬಹುದು. ಆದಾಗ್ಯೂ, ಇಂತಹ ಸೂಕ್ಷ್ಮ ಗುರಿನಿರ್ದಿಷ್ಟ ಪ್ರಚಾರವು ವೈಯಕ್ತಿಕ ಗೌಪ್ಯತೆ, ದತ್ತಾಂಶದ ದುರುಪಯೋಗ, ಪಾರದರ್ಶಕತೆ ಮತ್ತು ರಾಜಕೀಯ ಪ್ರಚಾರದ ನ್ಯಾಯಸಮ್ಮತತೆಯ ಕುರಿತು ಮಹತ್ವದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ

**ಯುವ ಮತದಾರರು ಮತ್ತು ಸಾಮಾಜಿಕ ಮಾಧ್ಯಮ ಪ್ರಭಾವಿಗಳು**

ಯುವ ಮತದಾರರು ಸಾಮಾಜಿಕ ಮಾಧ್ಯಮ ವೇದಿಕೆಗಳ ಸಕ್ರಿಯ ಬಳಕೆದಾರರಾಗಿರುವುದರಿಂದ, ರಾಜಕೀಯ ಪಕ್ಷಗಳು ಅವರನ್ನು ತಲುಪಲು ಸಂಕ್ಷಿಪ್ತ, ದೃಶ್ಯಾತ್ಮಕವಾಗಿ ಆಕರ್ಷಕ ಹಾಗೂ ಭಾವನಾತ್ಮಕವಾಗಿ

ಪ್ರಭಾವ ಬೀರುವಂತಹ ರಾಜಕೀಯ ವಿಷಯಗಳನ್ನು ಬಳಸಿಕೊಳ್ಳುತ್ತಿವೆ.

ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಡಿಜಿಟಲ್ ರಾಜಕೀಯ ಸಂವಹನದ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆ. ವೈಯಕ್ತಿಕ ಅನುಭವಗಳು, ಮನರಂಜನಾ ವಿಷಯಗಳು, ರಾಜಕೀಯ ವಿಶ್ಲೇಷಣೆಗಳು ಮತ್ತು ಅನೌಪಚಾರಿಕ ಚರ್ಚೆಗಳ ಮೂಲಕ ಅವರು ತಮ್ಮ ಅನುಯಾಯಿಗಳೊಂದಿಗೆ ನಿಕಟ ಸಂವಹನವನ್ನು ಸ್ಥಾಪಿಸಿಕೊಳ್ಳುತ್ತಾರೆ. ಇದರಿಂದ ರಾಜಕೀಯ ವಿಚಾರಗಳು ಮತ್ತು ಅಭಿಪ್ರಾಯಗಳನ್ನು ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರಿಗೆ ತಲುಪಿಸುವ ಸಾಮರ್ಥ್ಯವನ್ನು ಅವರು ಹೊಂದಿದ್ದಾರೆ

ಸಾಮಾಜಿಕ ಮಾಧ್ಯಮ ಬಳಕೆದಾರರು ತಮ್ಮ ನೆಚ್ಚಿನ ಪ್ರಭಾವಿಗಳೊಂದಿಗೆ ವೈಯಕ್ತಿಕ ಪರಿಚಯ ಅಥವಾ ಆತ್ಮೀಯತೆಯ ಭಾವನೆಯನ್ನು ಬೆಳೆಸಿಕೊಳ್ಳುವ ಸಾಧ್ಯತೆಯಿದೆ. ಪರಿಣಾಮವಾಗಿ, ಪ್ರಭಾವಿಗಳು ರಾಜಕೀಯ ವಿಷಯಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಾಗ, ಅವು ಅವರ ಅನುಯಾಯಿಗಳ ಅಥವಾ ಕಾರ್ಯಕರ್ತರ ರಾಜಕೀಯ ದೃಷ್ಟಿಕೋನ, ಅಭಿಪ್ರಾಯ ರೂಪುಗೊಳಿಸುವಿಕೆ ಮತ್ತು ರಾಜಕೀಯ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಯನ್ನು ಹೊಂದಿರುತ್ತವೆ.

ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಸಂಕೀರ್ಣ ರಾಜಕೀಯ ವಿಷಯಗಳನ್ನು ಸರಳ ಮತ್ತು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ವಿವರಿಸುವುದು, ಮತದಾನದ ಮಹತ್ವದ ಕುರಿತು ಜಾಗೃತಿ ಮೂಡಿಸುವುದು ಹಾಗೂ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳಲ್ಲಿ ರಾಜಕೀಯ ನಾಯಕರನ್ನು ಪ್ರಶ್ನಿಸುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಕೊಡುಗೆ ನೀಡಬಹುದು.

ಆದರೆ, ಸಾಮಾಜಿಕ ಮಾಧ್ಯಮದ ಪ್ರಭಾವಿಗಳ ರಾಜಕೀಯ ವಿಷಯಗಳಲ್ಲಿ ಕೆಲವು ಅಪಾಯಗಳೂ ಅಡಗಿವೆ. ಹೆಚ್ಚಿನ ಸಂಖ್ಯೆಯ ಅನುಯಾಯಿಗಳನ್ನು ಹೊಂದಿರುವ ವ್ಯಕ್ತಿಗೆ ತಾನು ಚರ್ಚಿಸುವ ರಾಜಕೀಯ ವಿಷಯದ ಕುರಿತು ಅಗತ್ಯವಾದ ಪರಿಣತಿ ಅಥವಾ ಸಮರ್ಪಕ ಜ್ಞಾನ ಇಲ್ಲದಿರುವ ಸಾಧ್ಯತೆಯಿದೆ. ರಾಜಕೀಯ ವಿಶ್ಲೇಷಣೆಯೊಂದಿಗೆ ಮನರಂಜನಾ ವಿಷಯಗಳು ಬೆರೆತಾಗ, ಪ್ರೇಕ್ಷಕರಿಗೆ ರಾಜಕೀಯ ಪ್ರಚಾರ, ವೈಯಕ್ತಿಕ ಅಭಿಪ್ರಾಯ ಮತ್ತು ನಿಷ್ಪಕ್ಷಪಾತ ವಿಶ್ಲೇಷಣೆಯ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗಬಹುದು. ಆದ್ದರಿಂದ, ರಾಜಕೀಯ ವಿಷಯಗಳ ಪ್ರಸ್ತುತಿಯಲ್ಲಿ ಪಾರದರ್ಶಕತೆ ಅತ್ಯಂತ ಮಹತ್ವದ್ದಾಗಿದೆ. ಪ್ರಕಟಿಸಲಾಗುವ ರಾಜಕೀಯ ವಿಷಯವು ವೈಯಕ್ತಿಕ ಅಭಿಪ್ರಾಯವೇ, ಜಾಹೀರಾತು ಪ್ರಚಾರವೇ ಅಥವಾ ರಾಜಕೀಯ ಪಕ್ಷದ ಬೆಂಬಲಿತ ವಿಷಯವೇ ಎಂಬುದನ್ನು ಸ್ಪಷ್ಟವಾಗಿ ಬಹಿರಂಗಪಡಿಸುವುದು ಅಗತ್ಯವಾಗಿದೆ.

**ರಾಜಕೀಯ ಮಿಥ್ಯೆಗಳು, ಸುಳ್ಳು ಸುದ್ದಿ ಮತ್ತು ತಪ್ಪು ಮಾಹಿತಿ**

ಸಾಮಾಜಿಕ ಮಾಧ್ಯಮದ ಪ್ರಮುಖ ಸವಾಲುಗಳಲ್ಲಿ ಸುಳ್ಳು ಮತ್ತು ದಾರಿತಪ್ಪಿಸುವ ಮಾಹಿತಿಯ ತ್ವರಿತ ಪ್ರಸಾರವೂ ಒಂದಾಗಿದೆ. ವದಂತಿಗಳು, ತಿರುಚಿದ ಚಿತ್ರಗಳು, ಸಂಪಾದಿತ ವಿಡಿಯೋಗಳು, ಕಲ್ಪಿತ ಹೇಳಿಕೆಗಳು ಹಾಗೂ ಹಳೆಯ ವಿಷಯಗಳನ್ನು ಹೊಸ ಘಟನೆಗಳಂತೆ ಪ್ರಸಾರ ಮಾಡುವುದರಿಂದ ತಪ್ಪು ಮಾಹಿತಿ ವ್ಯಾಪಕವಾಗಿ ಹರಡಬಹುದು. ಪರಿಚಿತರಿಂದ ಬರುವ ಮಾಹಿತಿಯನ್ನು ಜನರು ಹೆಚ್ಚು ನಂಬುವ ಸಾಧ್ಯತೆಯಿರುವುದರಿಂದ ಖಾಸಗಿ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಇದರ ಪ್ರಸಾರ ಮತ್ತಷ್ಟು ವೇಗಗೊಳ್ಳಬಹುದು. ಕೃತಕ ಬುದ್ಧಿಮತ್ತೆಯ ಬೆಳವಣಿಗೆಯಿಂದ ಕೃತಕ ಚಿತ್ರಗಳು, ಧ್ವನಿ ನಕಲು ಮತ್ತು ಡೀಪ್‌ಫೇಕ್‌ಗಳಂತಹ ತಂತ್ರಜ್ಞಾನಗಳು

ನೈಜವೆಂದು ತೋರುವ ಸುಳ್ಳು ವಿಷಯಗಳ ಸೃಷ್ಟಿಗೆ ಅವಕಾಶ ನೀಡಿವೆ. ತಪ್ಪು ಮಾಹಿತಿಯು ಸತ್ಯಾಸತ್ಯತೆ ಪರಿಶೀಲಿಸುವುದಕ್ಕೂ ಮುನ್ನವೇ ಹೆಚ್ಚಿನ ಜನರನ್ನು ತಲುಪುವುದರಿಂದ, ನಂತರ ಅದನ್ನು ಸರಿಪಡಿಸುವುದು ಕಷ್ಟಕರವಾಗುತ್ತದೆ.

**ರಾಜಕೀಯ ಧ್ರುವೀಕರಣ ಮತ್ತು ಸಮುದಾಯ ಆಧಾರಿತ ರಾಜಕೀಯ**

ಸಾಮಾಜಿಕ ಮಾಧ್ಯಮವು ರಾಜಕೀಯ ಭಾಗವಹಿಸುವಿಕೆಯನ್ನು ವಿಸ್ತರಿಸುವುದರ ಜೊತೆಗೆ ರಾಜಕೀಯ ಧ್ರುವೀಕರಣಕ್ಕೂ ಕಾರಣವಾಗುವ ಸಾಧ್ಯತೆಯಿದೆ. ಬಳಕೆದಾರರ ಆಸಕ್ತಿ, ಹಿಂದಿನ ಚಟುವಟಿಕೆ ಮತ್ತು ವೀಕ್ಷಣಾ ಮಾದರಿಗಳ ಆಧಾರದ ಮೇಲೆ ಒಂದೇ ರೀತಿಯ ರಾಜಕೀಯ ವಿಷಯಗಳು ನಿರಂತರವಾಗಿ ಕಾಣಿಸಿಕೊಳ್ಳುವುದರಿಂದ, ವ್ಯಕ್ತಿಗಳು ತಮ್ಮದೇ ಅಭಿಪ್ರಾಯಗಳನ್ನು ದೃಢೀಕರಿಸುವ ಮಾಹಿತಿಯ ವಲಯದಲ್ಲಿ ಸಿಲುಕಿಕೊಳ್ಳಬಹುದು. ಇದನ್ನು 'ಪ್ರತಿಧ್ವನಿ ಕೋಣೆ' ಎಂದು ಕರೆಯಲಾಗುತ್ತದೆ. ಕರ್ನಾಟಕದ ರಾಜಕೀಯದಲ್ಲಿ ಜಾತಿ, ಭಾಷೆ, ಧರ್ಮ ಮತ್ತು ಸಮುದಾಯದಂತಹ ಅಂಶಗಳು ಪ್ರಮುಖವಾಗಿರುವ ಹಿನ್ನೆಲೆಯಲ್ಲಿ, ಸಾಮಾಜಿಕ ಮಾಧ್ಯಮವು ಅವಕಾಶವಂಚಿತ ಸಮುದಾಯಗಳಿಗೆ ಅಭಿವ್ಯಕ್ತಿಯ ವೇದಿಕೆಯನ್ನು ಒದಗಿಸಿದರೂ, ದ್ವೇಷ, ಪೂರ್ವಾಗ್ರಹ ಮತ್ತು ತಪ್ಪು ಮಾಹಿತಿಯ ಪ್ರಸಾರವು ಸಾಮಾಜಿಕ ವಿಭಜನೆಯನ್ನು ಹೆಚ್ಚಿಸುವ ಸಾಧ್ಯತೆಯನ್ನೂ ಹೊಂದಿದೆ.

**ಸಾಮಾಜಿಕ ಮಾಧ್ಯಮ ಮತ್ತು ಚುನಾವಣೆ**

ಕರ್ನಾಟಕದ 2018 ಮತ್ತು 2023ರ ವಿಧಾನಸಭಾ ಚುನಾವಣೆಗಳು ಹಾಗೂ 2024ರ ಲೋಕಸಭಾ ಚುನಾವಣೆಯಲ್ಲಿ ಡಿಜಿಟಲ್ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮ ಆಧಾರಿತ ಪ್ರಚಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ. ರಾಜಕೀಯ ಪಕ್ಷಗಳು ನಾಯಕತ್ವದ ಚಿತ್ರಣ ನಿರ್ಮಾಣ, ಪಕ್ಷದ ನೀತಿ ಮತ್ತು ಕಾರ್ಯಸೂಚಿಗಳ ಪ್ರಚಾರ, ಎದುರಾಳಿ ಪಕ್ಷಗಳ ನಿಲುವುಗಳಿಗೆ ಪ್ರತಿಕ್ರಿಯೆ ಹಾಗೂ ಯುವ ಮತದಾರರನ್ನು ತಲುಪಲು ಸಾಮಾಜಿಕ ಮಾಧ್ಯಮವನ್ನು ಬಳಸಿಕೊಂಡಿವೆ. ಹ್ಯಾಶ್‌ಟ್ಯಾಗ್‌ಗಳು, ಚಿಕ್ಕ ವಿಡಿಯೋಗಳು ಮತ್ತು ವೈರಲ್ ಪೋಸ್ಟ್‌ಗಳು ಸಾರ್ವಜನಿಕ ಚರ್ಚೆಯಲ್ಲಿನ ವಿಷಯಗಳ ಆದ್ಯತೆಯನ್ನು ಪ್ರಭಾವಿಸುವ ಸಾಮರ್ಥ್ಯ ಹೊಂದಿವೆ.

ಆದಾಗ್ಯೂ, ಮತದಾನದ ನಿರ್ಧಾರವನ್ನು ಸಾಮಾಜಿಕ ಮಾಧ್ಯಮವೊಂದೇ ನಿರ್ಧರಿಸುವುದಿಲ್ಲ. ಅಭ್ಯರ್ಥಿಯ ವ್ಯಕ್ತಿತ್ವ, ಪಕ್ಷದ ಮೇಲಿನ ನಿಷ್ಠೆ, ಜಾತಿ ಮತ್ತು ಸಮುದಾಯ ಸಂಬಂಧಗಳು, ಸ್ಥಳೀಯ ಅಭಿವೃದ್ಧಿ, ಸರ್ಕಾರದ ಕಾರ್ಯಕ್ಷಮತೆ, ಕಲ್ಯಾಣ ಯೋಜನೆಗಳು ಹಾಗೂ ಸ್ಥಳೀಯ ರಾಜಕೀಯ ಜಾಲಗಳು ಸಹ ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ ಕರ್ನಾಟಕದ ಚುನಾವಣಾ ರಾಜಕೀಯವನ್ನು *'ಹೈಬ್ರಿಡ್ ಪ್ರಚಾರ ಮಾದರಿ'*ಯಾಗಿ ಪರಿಗಣಿಸಬಹುದು. ಇಲ್ಲಿ ಡಿಜಿಟಲ್ ಪ್ರಚಾರವು ಸಾರ್ವಜನಿಕ ಸಭೆಗಳು, ಮನೆಮನೆ ಪ್ರಚಾರ ಮತ್ತು ಸ್ಥಳೀಯ ಮುಖಂಡರ ಜಾಲದಂತಹ ಸಾಂಪ್ರದಾಯಿಕ ಪ್ರಚಾರ ವಿಧಾನಗಳನ್ನು ಸಂಪೂರ್ಣವಾಗಿ ಬದಲಿಸುವ ಬದಲು ಅವುಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.

**ನಿರ್ದಿಷ್ಟ ಮತದಾರರನ್ನು ಗುರಿಯಾಗಿಸಿಕೊಂಡ ಪ್ರಚಾರ, ದತ್ತಾಂಶ ವಿಶ್ಲೇಷಣೆ ಮತ್ತು ಕೃತಕ ಬುದ್ಧಿಮತ್ತೆ**

ಆಧುನಿಕ ಚುನಾವಣಾ ಪ್ರಚಾರದಲ್ಲಿ ದತ್ತಾಂಶ ವಿಶ್ಲೇಷಣೆಯ ಬಳಕೆ ಹೆಚ್ಚಾಗಿದೆ. ಮತದಾರರ ಜನಸಂಖ್ಯಾ ಲಕ್ಷಣಗಳು, ಆಸಕ್ತಿಗಳು ಮತ್ತು ರಾಜಕೀಯ ವರ್ತನೆಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ಲೇಷಿಸುವ ಮೂಲಕ ನಿರ್ದಿಷ್ಟ ಮತದಾರ ಗುಂಪುಗಳನ್ನು ಗುರಿಯಾಗಿಸಿಕೊಂಡು ರಾಜಕೀಯ ಸಂದೇಶಗಳನ್ನು ತಲುಪಿಸಲು ಸಾಧ್ಯವಾಗಿದೆ. ಇದರಿಂದ ಪ್ರಚಾರ ಹೆಚ್ಚು ಗುರಿನಿರ್ದಿಷ್ಟವಾಗುವ ಸಾಧ್ಯತೆಯಿದ್ದರೂ, ವೈಯಕ್ತಿಕ ದತ್ತಾಂಶದ ಬಳಕೆ, ಗೌಪ್ಯತೆ, ಪಾರದರ್ಶಕತೆ ಮತ್ತು

ಮತದಾರರ ಸ್ವಾಯತ್ತತೆಯ ಕುರಿತು ಪ್ರಶ್ನೆಗಳು ಉದ್ಭವಿಸುತ್ತವೆ. ಆದ್ದರಿಂದ ದತ್ತಾಂಶಾಧಾರಿತ ಚುನಾವಣಾ ಪ್ರಚಾರದಲ್ಲಿ ಹೊಣೆಗಾರಿಕೆ ಮತ್ತು ಮತದಾರರಿಗೆ ಮಾಹಿತಿಯ ಅರಿವಿನ ಹಕ್ಕನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿದೆ.

ಕೃತಕ ಬುದ್ಧಿಮತ್ತೆಯ ಬಳಕೆಯು ಚುನಾವಣಾ ಸಂವಹನಕ್ಕೆ ಹೊಸ ಆಯಾಮವನ್ನು ನೀಡಿದೆ. ಎಐ ಮೂಲಕ ಬರಹ, ಚಿತ್ರ, ವಿಡಿಯೋ ಮತ್ತು ಧ್ವನಿಯಂತಹ ವಿಷಯಗಳನ್ನು ವೇಗವಾಗಿ ಸೃಷ್ಟಿಸಬಹುದಾದರೂ, ಇದೇ ತಂತ್ರಜ್ಞಾನವನ್ನು ಡೀಪ್‌ಫೇಕ್‌ಗಳು ಮತ್ತು ಕೃತಕ ರಾಜಕೀಯ ವಿಷಯಗಳ ಸೃಷ್ಟಿಗೆ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯಿದೆ. ಇಂತಹ ವಿಷಯಗಳು ಸಾರ್ವಜನಿಕ ಅಭಿಪ್ರಾಯ ಮತ್ತು ಮತದಾರರ ಮಾಹಿತಿಯಾಧಾರಿತ ನಿರ್ಧಾರಗಳ ಮೇಲೆ ಪರಿಣಾಮ ಬೀರಬಹುದು. ಹೀಗಾಗಿ ಎಐ ಬಳಕೆಯ ಸಂದರ್ಭದಲ್ಲಿ ಕೃತಕ ವಿಷಯಗಳನ್ನು ಗುರುತಿಸುವ ವ್ಯವಸ್ಥೆ, ತ್ವರಿತ ವಾಸ್ತವ ಪರಿಶೀಲನೆ ಹಾಗೂ ಮಾಧ್ಯಮ ಸಾಕ್ಷರತೆ ಮತ್ತು ಸಾರ್ವಜನಿಕ ಜಾಗೃತಿ ಅಗತ್ಯವಾಗಿದೆ.

**ಆಡಳಿತ, ನಿಯಂತ್ರಣ ಮತ್ತು ನೈತಿಕ ಸವಾಲುಗಳು**

ಸಾಮಾಜಿಕ ಮಾಧ್ಯಮದ ರಾಜಕೀಯ ಬಳಕೆಯ ಹೆಚ್ಚಳವು ತಪ್ಪು ಮಾಹಿತಿ, ದ್ವೇಷ ಭಾಷಣ, ಕೃತಕ ವಿಷಯಗಳು, ಗೌಪ್ಯತೆ ಉಲ್ಲಂಘನೆ ಮತ್ತು ರಾಜಕೀಯ ಜಾಹೀರಾತುಗಳಿಗೆ ಸಂಬಂಧಿಸಿದ ನಿಯಂತ್ರಣಾತ್ಮಕ ಹಾಗೂ ನೈತಿಕ ಸವಾಲುಗಳನ್ನು ಸೃಷ್ಟಿಸಿದೆ. ಇವುಗಳನ್ನು ನಿಯಂತ್ರಿಸುವ ಸಂದರ್ಭದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ಮಾಹಿತಿಯ ಹಕ್ಕು ಮತ್ತು ಸಾರ್ವಜನಿಕ ಹಿತಾಸಕ್ತಿಯ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಅಗತ್ಯವಾಗಿದೆ. ಚುನಾವಣಾ ಅವಧಿಯಲ್ಲಿ ಸಾಮಾಜಿಕ ಮಾಧ್ಯಮ ಬಳಕೆಯ ಮೇಲ್ವಿಚಾರಣೆ ಮತ್ತು ಸಂಬಂಧಿತ ಮಾರ್ಗಸೂಚಿಗಳ ಅನುಷ್ಠಾನಕ್ಕೂ ಮಹತ್ವವಿದೆ.

ನಿಯಂತ್ರಣದ ಜವಾಬ್ದಾರಿ ಸರ್ಕಾರಕ್ಕೆ ಮಾತ್ರ ಸೀಮಿತವಾಗದೆ, ಸಾಮಾಜಿಕ ಮಾಧ್ಯಮ ವೇದಿಕೆಗಳು ಮತ್ತು ನಾಗರಿಕರಿಗೂ ಇದೆ. ವೇದಿಕೆಗಳು ತಪ್ಪು ಮಾಹಿತಿ ಮತ್ತು ಕೃತಕ ವಿಷಯಗಳ ವಿರುದ್ಧ ಪರಿಣಾಮಕಾರಿ ವ್ಯವಸ್ಥೆಗಳನ್ನು ರೂಪಿಸಬೇಕು. ನಾಗರಿಕರು ಅನುಮಾನಾಸ್ಪದ ಮಾಹಿತಿಯ ಮೂಲ, ದಿನಾಂಕ, ಸ್ಥಳ ಮತ್ತು ವಿಶ್ವಾಸಾರ್ಹತೆಯನ್ನು ಪರಿಶೀಲಿಸಿ, ವಿವಿಧ ಮೂಲಗಳೊಂದಿಗೆ ಹೋಲಿಕೆ ಮಾಡುವ ವಿಮರ್ಶಾತ್ಮಕ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಈ ರೀತಿಯ ಡಿಜಿಟಲ್ ಮತ್ತು ಮಾಧ್ಯಮ ಸಾಕ್ಷರತೆಯು ತಪ್ಪು ಮಾಹಿತಿ ಹಾಗೂ ದಾರಿತಪ್ಪಿಸುವ ರಾಜಕೀಯ ವಿಷಯಗಳ ಪ್ರಭಾವವನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ.

**ಪ್ರಜಾಪ್ರಭುತ್ವದ ಮೇಲೆ ಸಾಮಾಜಿಕ ಮಾಧ್ಯಮದ ಪರಿಣಾಮ**

ಸಾಮಾಜಿಕ ಮಾಧ್ಯಮವು ಪ್ರಜಾಪ್ರಭುತ್ವದ ಮೇಲೆ ಸಕಾರಾತ್ಮಕ ಹಾಗೂ ನಕಾರಾತ್ಮಕ ಎರಡೂ ರೀತಿಯ ಪರಿಣಾಮಗಳನ್ನು ಬೀರುತ್ತದೆ. ಸಕಾರಾತ್ಮಕವಾಗಿ, ನಾಗರಿಕರಿಗೆ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು, ಚುನಾವಣಾ ಪ್ರಕ್ರಿಯೆಗಳು, ನೀತಿಗಳು ಮತ್ತು ಸಾರ್ವಜನಿಕ ವಿಚಾರಗಳ ಕುರಿತು ತ್ವರಿತವಾಗಿ ಮಾಹಿತಿ ಪಡೆಯಲು ಅವಕಾಶ ಕಲ್ಪಿಸುತ್ತದೆ. ರಾಜಕೀಯ ನಾಯಕರು ಮತ್ತು ನಾಗರಿಕರ ನಡುವೆ ನೇರ ಸಂವಹನಕ್ಕೆ ವೇದಿಕೆ ಒದಗಿಸುವುದರ ಜೊತೆಗೆ, ವಿಶೇಷವಾಗಿ ಯುವಜನರ ರಾಜಕೀಯ ಭಾಗವಹಿಸುವಿಕೆ, ಮತದಾರರ ಜಾಗೃತಿ ಮತ್ತು ಸಾರ್ವಜನಿಕ ಚರ್ಚೆಯನ್ನು ಉತ್ತೇಜಿಸುತ್ತದೆ. ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಅವಕಾಶವಂಚಿತ ಸಮುದಾಯಗಳು ತಮ್ಮ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ವ್ಯಕ್ತಪಡಿಸಲು ಇದು ಪರಿಣಾಮಕಾರಿ ಮಾಧ್ಯಮವಾಗಿದ್ದು, ರಾಜಕೀಯ ಹಾಗೂ ಸಾಮಾಜಿಕ ಚಳವಳಿಗಳನ್ನು

ಸಂಘಟಿಸಲು ಮತ್ತು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ತಲುಪಲು ಸಹಕಾರಿಯಾಗಿದೆ.

ಆದರೆ ಸಾಮಾಜಿಕ ಮಾಧ್ಯಮವು ಕೆಲವು ಗಂಭೀರ ಸವಾಲುಗಳನ್ನೂ ಹೊಂದಿದೆ. ತಪ್ಪು ಮತ್ತು ದಾರಿತಪ್ಪಿಸುವ ಮಾಹಿತಿಯ ತ್ವರಿತ ಪ್ರಸಾರ, ರಾಜಕೀಯ ಮಿಥ್ಯೆಗಳ ಬಲವರ್ಧನೆ, ಪರಿಶೀಲಿಸದ ಸುದ್ದಿಗಳ ಹರಡುವಿಕೆ ಮತ್ತು ಸಾಮಾಜಿಕ ಮಾಧ್ಯಮ ಅಲ್ಗಾರಿದಮ್‌ಗಳಿಂದ ಉಂಟಾಗುವ 'ಪ್ರತಿಧ್ವನಿ ಕೋಣೆಗಳು' ಸಾರ್ವಜನಿಕ ಅಭಿಪ್ರಾಯವನ್ನು ಪ್ರಭಾವಿಸಬಹುದು. ದ್ವೇಷ ಭಾಷಣ, ವೈಯಕ್ತಿಕ ದಾಳಿಗಳು ಮತ್ತು ವಿಭಜನೆಯ ರಾಜಕೀಯವು ಸಾಮಾಜಿಕ ಉದ್ವಿಗ್ನತೆ ಹಾಗೂ ರಾಜಕೀಯ ಧ್ರುವೀಕರಣವನ್ನು ಹೆಚ್ಚಿಸುವ ಸಾಧ್ಯತೆಯಿದೆ. ಇದಲ್ಲದೆ, ಕೃತಕ ಬುದ್ಧಿಮತ್ತೆ ಆಧಾರಿತ ಕೃತಕ ಚಿತ್ರಗಳು, ವಿಡಿಯೋಗಳು, ಧ್ವನಿಮುದ್ರಣಗಳು ಮತ್ತು ಡೀಪ್‌ಫೇಕ್‌ಗಳು ಮತದಾರರನ್ನು ದಾರಿತಪ್ಪಿಸುವ ಹಾಗೂ ರಾಜಕೀಯ ಮಾಹಿತಿಯ ವಿಶ್ವಾಸಾರ್ಹತೆಯನ್ನು ದುರ್ಬಲಗೊಳಿಸುವ ಅಪಾಯವನ್ನು ಹೊಂದಿವೆ.

ಹೀಗಾಗಿ, ಸಾಮಾಜಿಕ ಮಾಧ್ಯಮವನ್ನು ಸಂಪೂರ್ಣವಾಗಿ ಪ್ರಜಾಪ್ರಭುತ್ವಪರ ಅಥವಾ ಪ್ರಜಾಪ್ರಭುತ್ವ ವಿರೋಧಿ ಸಾಧನವೆಂದು ಪರಿಗಣಿಸಲು ಸಾಧ್ಯವಿಲ್ಲ. ಅದರ ಪರಿಣಾಮವು ರಾಜಕೀಯ ಪಕ್ಷಗಳು, ಸರ್ಕಾರಗಳು, ಮಾಧ್ಯಮಗಳು, ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಮತ್ತು ನಾಗರಿಕರು ಅದನ್ನು ಹೇಗೆ ಬಳಸುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಜವಾಬ್ದಾರಿಯುತ ಬಳಕೆ, ಡಿಜಿಟಲ್ ಸಾಕ್ಷರತೆ, ಮಾಹಿತಿಯ ವಾಸ್ತವ ಪರಿಶೀಲನೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಬಲಪಡಿಸುವ ಮೂಲಕ ಸಾಮಾಜಿಕ ಮಾಧ್ಯಮವನ್ನು ಹೆಚ್ಚು ಪರಿಣಾಮಕಾರಿ ಪ್ರಜಾಪ್ರಭುತ್ವ ಸಾಧನವನ್ನಾಗಿ ಬಳಸಬಹುದು.

**ಸಂಶೋಧನಾ ಫಲಿತಾಂಶಗಳು**

ಈ ಅಧ್ಯಯನವು ಕರ್ನಾಟಕದಲ್ಲಿ ಸಾಮಾಜಿಕ ಮಾಧ್ಯಮಗಳು ನಾಗರಿಕರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಗಮನಾರ್ಹ ಪ್ರಭಾವ ಬೀರುವ ಸಾಧ್ಯತೆಯನ್ನು ಸೂಚಿಸುತ್ತದೆ. ವಿಶೇಷವಾಗಿ ಯುವ ಮತದಾರರ ಸಂದರ್ಭದಲ್ಲಿ, ವಾಟ್ಸಾಪ್, ಇನ್‌ಸ್ಟಾಗ್ರಾಂ ಮತ್ತು ಯೂಟ್ಯೂಬ್‌ನಂತಹ ಡಿಜಿಟಲ್ ವೇದಿಕೆಗಳು ರಾಜಕೀಯ ಮಾಹಿತಿಯ ಪಡೆಯಲು ಅವಕಾಶವನ್ನು ಸುಲಭಗೊಳಿಸುವುದರ ಜೊತೆಗೆ, ರಾಜಕೀಯ ಜಾಗೃತಿ, ಅಭಿಪ್ರಾಯ ವಿನಿಮಯ ಮತ್ತು ವಿವಿಧ ರೀತಿಯ ರಾಜಕೀಯ ಭಾಗವಹಿಸುವಿಕೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ..

ಆದಾಗ್ಯೂ, ಸಾಮಾಜಿಕ ಮಾಧ್ಯಮಗಳ ಮೂಲಕ ಹರಡುವ ತಪ್ಪು ಮಾಹಿತಿ, ರಾಜಕೀಯ ಮಿಥ್ಯೆಗಳು, ಸಾಮಾಜೀಕ ಮಾಧ್ಯಮಗಳ ಪ್ರಭಾವಿಗಳ ಪಕ್ಷಪಾತ ನಿರೂಪಣೆಗಳು ಹಾಗೂ ಭಾವನಾತ್ಮಕವಾಗಿ ಪ್ರಚೋದಿಸುವ ವಿಷಯಗಳು ಸಾರ್ವಜನಿಕ ಅಭಿಪ್ರಾಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಯನ್ನು ಹೊಂದಿವೆ. ಇಂತಹ ವಿಷಯಗಳ ನಿರಂತರ ಪ್ರಸರಣವು ರಾಜಕೀಯ ಧ್ರುವೀಕರಣವನ್ನು ಹೆಚ್ಚಿಸುವುದರ ಜೊತೆಗೆ, ಮತದಾರರ ರಾಜಕೀಯ ನಿರ್ಧಾರಗಳ ಮೇಲೂ ಪ್ರಭಾವ ಬೀರಬಹುದಾಗಿದೆ.

ಈ ಹಿನ್ನೆಲೆಯಲ್ಲಿ, ಡಿಜಿಟಲ್ ಸಾಕ್ಷರತೆಯು ರಾಜಕೀಯ ತಪ್ಪು ಮಾಹಿತಿಯನ್ನು ಎದುರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಡಿಜಿಟಲ್ ಸಾಕ್ಷರತೆಯನ್ನು ಹೊಂದಿರುವ ನಾಗರಿಕರು ಮಾಹಿತಿಯ ಮೂಲ ಮತ್ತು ವಿಶ್ವಾಸಾರ್ಹತೆಯನ್ನು ಪರಿಶೀಲಿಸುವುದು, ವಿವಿಧ ಮೂಲಗಳಲ್ಲಿನ ಮಾಹಿತಿಯನ್ನು ಹೋಲಿಕೆ ಮಾಡುವುದು ಹಾಗೂ ತಪ್ಪು ಅಥವಾ ದಾರಿತಪ್ಪಿಸುವ ರಾಜಕೀಯ ವಿಷಯಗಳನ್ನು ಗುರುತಿಸುವಲ್ಲಿ ಹೆಚ್ಚಿನ ಸಾಮರ್ಥ್ಯ ಹೊಂದಬೇಕಾಗಿದೆ. ಆದ್ದರಿಂದ, ಡಿಜಿಟಲ್ ಸಾಕ್ಷರತೆಯನ್ನು ರಾಜಕೀಯ ತಪ್ಪು ಮಾಹಿತಿಯ

ಪರಿಣಾಮವನ್ನು ಕಡಿಮೆ ಮಾಡುವ ಮತ್ತು ನಾಗರಿಕರ ವಿಮರ್ಶಾತ್ಮಕ ಚಿಂತನಾ ಸಾಮರ್ಥ್ಯವನ್ನು ಬಲಪಡಿಸುವ ಪ್ರಮುಖ ರಕ್ಷಣಾತ್ಮಕ ಅಂಶವಾಗಿ ಪರಿಗಣಿಸಬಹುದು.

**ಶಿಫಾರಸ್ಸುಗಳು**

***ಡಿಜಿಟಲ್ ಸಾಕ್ಷರತೆಯನ್ನು ಬಲಪಡಿಸುವುದು***

ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಶೈಕ್ಷಣಿಕ ವ್ಯವಸ್ಥೆಯಲ್ಲಿ ಡಿಜಿಟಲ್ ಸಾಕ್ಷರತೆಗೆ ಹೆಚ್ಚಿನ ಮಹತ್ವ ನೀಡಬೇಕು. ಆನ್‌ಲೈನ್‌ನಲ್ಲಿ ಲಭ್ಯವಿರುವ ಮಾಹಿತಿಯ ಮೂಲ, ವಿಶ್ವಾಸಾರ್ಹತೆ ಮತ್ತು ನಿಖರತೆಯನ್ನು ಪರಿಶೀಲಿಸುವ ವಿಧಾನಗಳು, ತಪ್ಪು ಮಾಹಿತಿಯನ್ನು ಗುರುತಿಸುವ ಕೌಶಲ್ಯಗಳು ಹಾಗೂ ವಿವಿಧ ಮೂಲಗಳಲ್ಲಿನ ಮಾಹಿತಿಯನ್ನು ಹೋಲಿಕೆ ಮಾಡುವ ತಂತ್ರಗಳನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು.

***ರಾಜಕೀಯ ಜಾಹೀರಾತುಗಳಲ್ಲಿ ಪಾರದರ್ಶಕತೆ***

ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುವ ರಾಜಕೀಯ ಜಾಹೀರಾತುಗಳು ಮತ್ತು ಪ್ರಾಯೋಜಿತ ರಾಜಕೀಯ ವಿಷಯಗಳ ಮೂಲ, ಪ್ರಾಯೋಜಕರು ಹಾಗೂ ಉದ್ದೇಶಗಳನ್ನು ಸ್ಪಷ್ಟವಾಗಿ ಪ್ರಕಟಿಸುವ ವ್ಯವಸ್ಥೆಯನ್ನು ಬಲಪಡಿಸಬೇಕು. ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಪ್ರಭಾವಿಗಳ ನಡುವಿನ ಹಣಕಾಸು ಅಥವಾ ಪ್ರಚಾರಾತ್ಮಕ ಸಹಭಾಗಿತ್ವವಿದ್ದಲ್ಲಿ, ಅದನ್ನು ಸಾರ್ವಜನಿಕರಿಗೆ ಸ್ಪಷ್ಟವಾಗಿ ಬಹಿರಂಗಪಡಿಸಬೇಕು.

***ವಾಸ್ತವ ಪರಿಶೀಲನಾ ವ್ಯವಸ್ಥೆಯನ್ನು ಬಲಪಡಿಸುವುದು***

ಚುನಾವಣಾ ಅವಧಿಯಲ್ಲಿ ಹರಡುವ ರಾಜಕೀಯ ಮಾಹಿತಿ, ದಾವೆಗಳು ಮತ್ತು ಡಿಜಿಟಲ್ ವಿಷಯಗಳ ನಿಖರತೆಯನ್ನು ಪರಿಶೀಲಿಸಲು ಸ್ವತಂತ್ರ ವಾಸ್ತವ ಪರಿಶೀಲನಾ ಸಂಸ್ಥೆಗಳು, ಪತ್ರಕರ್ತರು ಮತ್ತು ನಾಗರಿಕ ಸಮಾಜದ ಸಂಘಟನೆಗಳ ನಡುವೆ ಸಮನ್ವಯವನ್ನು ಬಲಪಡಿಸಬೇಕು.

***ಸಾಮಾಜಿಕ ಮಾಧ್ಯಮ ವೇದಿಕೆಗಳ ಹೊಣೆಗಾರಿಕೆಯನ್ನು ಹೆಚ್ಚಿಸುವುದು***

ಸಾಮಾಜಿಕ ಮಾಧ್ಯಮ ವೇದಿಕೆಗಳು ಚುನಾವಣಾ ಅವಧಿಯಲ್ಲಿ ಹರಡುವ ಹಾನಿಕಾರಕ, ದಾರಿತಪ್ಪಿಸುವ ಮತ್ತು ಸುಳ್ಳಾಗಿರುವ ವಿಷಯಗಳನ್ನು ಗುರುತಿಸಿ, ಅವುಗಳ ವಿರುದ್ಧ ತ್ವರಿತ ಹಾಗೂ ಪಾರದರ್ಶಕ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ಬಲಪಡಿಸಬೇಕು. ವಿಷಯವನ್ನು ತೆಗೆದುಹಾಕುವುದು, ಅದರ ಪ್ರಸಾರವನ್ನು ನಿರ್ಬಂಧಿಸುವುದು ಅಥವಾ ಬಳಕೆದಾರರಿಗೆ ಸೂಕ್ತ ಎಚ್ಚರಿಕೆ ನೀಡುವಂತಹ ಕ್ರಮಗಳನ್ನು ಸ್ಪಷ್ಟ ಮಾರ್ಗಸೂಚಿಗಳ ಆಧಾರದ ಮೇಲೆ ಜಾರಿಗೊಳಿಸಬೇಕು.

***ಡೀಫ್‌ಫೇಕ್ ನಿಯಂತ್ರಣ:***

ಮತದಾರರನ್ನು ದಾರಿತಪ್ಪಿಸುವ ಸಾಧ್ಯತೆಯಿರುವ AI–ರಚಿತ ಅಥವಾ ಕೃತಕವಾಗಿ ತಿರುಚಲಾದ ರಾಜಕೀಯ ವಿಷಯಗಳನ್ನು ಸ್ಪಷ್ಟವಾಗಿ ಗುರುತಿಸುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ವಿಶೇಷವಾಗಿ ಕೃತಕವಾಗಿ ಸೃಷ್ಟಿಸಲಾದ ವಿಡಿಯೋ, ಧ್ವನಿ ಮತ್ತು ಚಿತ್ರಗಳಿಗೆ ಸೂಕ್ತ ಲೇಬಲ್ ಅಥವಾ ಎಚ್ಚರಿಕೆ ಸೂಚನೆಗಳನ್ನು ನೀಡುವ ಮೂಲಕ ಅವುಗಳ ಸ್ವರೂಪವನ್ನು ಬಳಕೆದಾರರಿಗೆ ತಿಳಿಸಬೇಕು. ಚುನಾವಣಾ ಅವಧಿಯಲ್ಲಿ ಇಂತಹ ವಿಷಯಗಳನ್ನು ತ್ವರಿತವಾಗಿ ಪತ್ತೆಹಚ್ಚಿ ಪರಿಶೀಲಿಸುವ ಮತ್ತು ಅಗತ್ಯವಿದ್ದಲ್ಲಿ ಅವುಗಳ ಪ್ರಸಾರವನ್ನು ನಿಯಂತ್ರಿಸುವ ಪರಿಣಾಮಕಾರಿ ವ್ಯವಸ್ಥೆಯನ್ನು ರೂಪಿಸುವುದು ಅಗತ್ಯವಾಗಿದೆ.

***ನಾಗರಿಕರಲ್ಲಿ ಮಾಹಿತಿ ಪರಿಶೀಲನೆಯ ಅಭ್ಯಾಸ ಬೆಳೆಸುವುದು***

ನಾಗರಿಕರು ಸಾಮಾಜಿಕ ಮಾಧ್ಯಮಗಳಲ್ಲಿ ಲಭ್ಯವಾಗುವ ರಾಜಕೀಯ ಮಾಹಿತಿಯನ್ನು ತಕ್ಷಣವೇ ನಂಬಿ ಅಥವಾ ಹಂಚಿಕೊಳ್ಳುವ ಬದಲು, ಅದರ ಮೂಲ, ವಿಶ್ವಾಸಾರ್ಹತೆ ಮತ್ತು ನಿಖರತೆಯನ್ನು ಪರಿಶೀಲಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು.

ವಿಶೇಷವಾಗಿ ವಿವಾದಾತ್ಮಕ ಅಥವಾ ಭಾವನಾತ್ಮಕವಾಗಿ ಪ್ರಚೋದಿಸುವ ರಾಜಕೀಯ ವಿಷಯಗಳನ್ನು ಹಂಚಿಕೊಳ್ಳುವ ಮೊದಲು ವಿಶ್ವಾಸಾರ್ಹ ಸುದ್ದಿ ಮೂಲಗಳು ಹಾಗೂ ವಾಸ್ತವ ಪರಿಶೀಲನಾ ಮೂಲಗಳ ಮೂಲಕ ಮಾಹಿತಿಯನ್ನು ದೃಢೀಕರಿಸುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಇಂತಹ ಅಭ್ಯಾಸವು ತಪ್ಪು ಮಾಹಿತಿಯ ಪ್ರಸಾರವನ್ನು ಕಡಿಮೆ ಮಾಡುವುದರ ಜೊತೆಗೆ, ಜವಾಬ್ದಾರಿಯುತ ಡಿಜಿಟಲ್ ನಾಗರಿಕತ್ವವನ್ನು ಉತ್ತೇಜಿಸಲು ಸಹಕಾರಿಯಾಗುತ್ತದೆ.

**ಸಮಾರೋಪ**

ರಾಜಕೀಯ ಜೀವನದಲ್ಲಿ ಸಾಮಾಜಿಕ ಮಾಧ್ಯಮವು ಪ್ರಮುಖ ಸಂವಹನ ಸಾಧನವಾಗಿ ರೂಪುಗೊಂಡಿದೆ. ವಾಟ್ಸಾಪ್, ಫೇಸ್ಬುಕ್, ಇನ್ಸ್ಟಾಗ್ರಾಂ, ಯೂಟ್ಯೂಬ್ ಮತ್ತು ಎಕ್ಸಗಳ ಮೂಲಕ ರಾಜಕೀಯ ಮಾಹಿತಿ, ಚರ್ಚೆ ಮತ್ತು ನಾಗರಿಕರ ಭಾಗವಹಿಸುವಿಕೆ ಹೆಚ್ಚಾಗಿದೆ. ವಿಶೇಷವಾಗಿ ಯುವಜನರಿಗೆ ಇದು ರಾಜಕೀಯ ಜಾಗೃತಿ ಮತ್ತು ಅಭಿವ್ಯಕ್ತಿಗೆ ಹೊಸ ಅವಕಾಶಗಳನ್ನು ಒದಗಿಸಿದೆ. ಆದರೆ ತಪ್ಪು ಮಾಹಿತಿ, ರಾಜಕೀಯ ಮಿಥ್ಯೆಗಳು, ದ್ವೇಷ ಭಾಷಣ, ಧ್ರುವೀಕರಣ ಮತ್ತು ಗೌಪ್ಯತೆ ಉಲ್ಲಂಘನೆಯಂತಹ ಸವಾಲುಗಳೂ ಎದುರಾಗಿವೆ. AI ಆಧಾರಿತ ಕೃತಕ ವಿಷಯಗಳು ಈ ಸಮಸ್ಯೆಗಳನ್ನು ಮತ್ತಷ್ಟು ಸಂಕೀರ್ಣಗೊಳಿಸಬಹುದು. ಆದ್ದರಿಂದ ಡಿಜಿಟಲ್ ಸಾಕ್ಷರತೆ, ವಾಸ್ತವ ಪರಿಶೀಲನೆ, ರಾಜಕೀಯ ಪಾರದರ್ಶಕತೆ ಮತ್ತು ಜವಾಬ್ದಾರಿಯುತ ಡಿಜಿಟಲ್ ಸಂವಹನ ಅಗತ್ಯವಾಗಿದೆ. ಸಾಮಾಜಿಕ ಮಾಧ್ಯಮದ ಪರಿಣಾಮವು ಅದರ ಜವಾಬ್ದಾರಿಯುತ ಬಳಕೆಯ ಮೇಲೆ ಅವಲಂಬಿತವಾಗಿದೆ.

**ಪರಾಮರ್ಶನ ಗ್ರಂಥಗಳು**


- Data Reportal. (2024). *Digital 2024: India*. DataReportal.
- Election Commission of India. (n.d.). *Social media and election campaign guidelines*. Election Commission of India.
- Government of Karnataka. (n.d.). *Digital governance, election information and fact-checking related publications*. Government of Karnataka.
- Ministry of Electronics and Information Technology, Government of India. (2026, February 10). *The Information Technology (Intermediary Guidelines and Digital Media Ethics Code) Rules, 2021*. Government of India.
- Newman, N., Fletcher, R., Robertson, C. T., Eddy, K., & Nielsen, R. K. (2024). *Digital news report 2024*. Reuters Institute for the Study of Journalism, University of Oxford.
- World Economic Forum. (2024). *The global risks report 2024* (19th ed.). World Economic Forum.